ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ :ಸಿ7(8)ಆರ್.ಟಿ.ಇ.ಶು.ಮರು.ಪಾ /2016-17 ದಿನಾಂಕ:24.11.2016

: : ಸುತ್ತೋಲೆ : :

ವಿಷಯ: ಆರ್.ಟಿ.ಇ ಶುಲ್ಕವನ್ನು ಖಜಾನೆಯ ಮೂಲಕ ಶಾಲೆಗಳಿಗೆ ಮರು ಪಾವತಿಸುವ ಕುರಿತು.

ಉಲ್ಲೇಖ: 1. ದಿನಾಂಕ:14/11/2016 ರಲ್ಲಿ ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಇವರ ಅಧ್ಯಕ್ಷತೆಯಲ್ಲಿ ಉಪನಿರ್ದೇಶಕರು (ಆಡಳಿತ) ಮತ್ತು ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ನಡೆದ ರಾಜ್ಯ ಮಟ್ಟದ ವಿಡಿಯೋ ಕಾನ್ಫರೆನ್ಸ್

2. ದಿನಾಂಕ: 16/11/2016 ರಲ್ಲಿ ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದಲ್ಲಿ ನಡೆದ ಜಿಲ್ಲಾ ಮಟ್ಟದ ಆರ್.ಟಿ.ಇ ನೋಡಲ್ ಅಧಿಕಾರಿಗಳು ಮತ್ತು ಪ್ರೋಗ್ರಾಮರ್‌ಗಳ ತರಬೇತಿ.

3.ದಿನಾಂಕ:17/11/2016 ರಂದು ಆಯುಕ್ತರು, ಸಾ.ಶಿ.ಇ,ಮತ್ತು ಕಾರ್ಯದರ್ಶಿಗಳು, ಖಜಾನೆ ಇವರೊಂದಿಗಿನ ಚರ್ಚೆ.

4. ದಿನಾಂಕ:21/11/2016 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಉಪನಿರ್ದೇಶಕರು (ಆಡಳಿತ) ಮತ್ತು ತಾಲ್ಲೂಕು/ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ನಡೆದ ರಾಜ್ಯ ಮಟ್ಟದ ವಿಡಿಯೋ ಕಾನ್ಫರೆನ್ಸ್.

5. ಈ ಕಛೇರಿ ಸುತ್ತೋಲೆ ಸಂಖ್ಯೆ: ಖಜಾನೆ-2 ನೋಂದಣಿ01/2016-17 ದಿನಾಂಕ: 23.11.2016

. &&&&&&&&&&&&

ಆರ್.ಟಿ.ಇ ಶುಲ್ಕ ಮರುಪಾವತಿಸುವ ಸಂಬಂಧ ಶಾಲೆಗಳ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಹೆಸರು ಇತ್ಯಾದಿ ಮಾಹಿತಿಗಳನ್ನು ಎನ್.ಐ.ಸಿ ಸಂಸ್ಥೆ ಸಿದ್ಧಪಡಿಸಿದ ತಂತ್ರಾಂಶದಲ್ಲಿ ಭರ್ತಿ ಮಾಡಲು ಈಗಾಗಲೇ ಉಲ್ಲೇಖ(1) ಸೂಚಿಸಿದೆ. ಮುಂದುವರೆದಂತೆ, ಖಜಾನೆ ಮೂಲಕವೇ ಶಾಲೆಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮೆ ಮಾಡಲು ಎಲ್ಲಾ ಉಪನಿರ್ದೇಶಕರಿಗೆ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಉಪನಿರ್ದೇಶಕರು(ಆಡಳಿತ) ರವರು ತಮಗೆ ಸಂಬಂಧಿಸಿದ ಖಜಾನೆ ಅಧಿಕಾರಿಗಳನ್ನು ಭೇಟಿ ಮಾಡಿ ಎಲ್ಲಾ ನಮೂನೆಗಳನ್ನು ಭರ್ತಿ ಮಾಡಿ ತಮ್ಮ (DSC Digital Signature Card) ನ್ನು 26/11/2016 ರೊಳಗೆ ಪಡೆಯಲು ತಿಳಿಸಿದೆ.

ಆಯಾ ಜಿಲ್ಲೆ ಆರ್.ಟಿ.ಇ ಶುಲ್ಕ ಮರುಪಾವತಿ ತಂತ್ರಾಂಶದಲ್ಲಿ ಶಾಲೆಗಳ "Acknowledgement " ಅನ್ನು ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದು ಅದರಲ್ಲಿ ನಮೂದಾಗಿರುವ ಬ್ಯಾಂಕ್ ಹೆಸರು, IFSC ಸಂಖ್ಯೆ ಮತ್ತು ಬ್ಯಾಂಕ್ ಖಾತೆ ಸಂಖ್ಯೆಯನ್ನು ಖಜಾನೆ ತಂತ್ರಾಂಶದಲ್ಲಿ ಶಾಲೆಗಳನ್ನು "Recipient Registration" ಅಡಿಯಲ್ಲಿ ನೋಂದಾಯಿಸಲು ತಿಳಿಸಿದೆ ಮತ್ತು e-Mandate Format ಗಳನ್ನು ಖಜಾನೆ ತಂತ್ರಾಂಶದ ಮೂಲಕವೇ ಮುದ್ರಿಸಿ ಸಂಬಂಧಪಟ್ಟ ಶಾಲೆಗಳಿಂದ e-Mandate ಮೇಲೆ ಶಾಲಾ ಮುಖ್ಯಸ್ಥರ / Authorized ವ್ಯಕ್ತಿಗಳ ಸಹಿ ಪಡೆದು, ಒಂದು ಖಾಲಿ ಚೆಕ್‌ನ್ನು "Cancel" ಎಂದು ಬರೆಸಿ e-Mandate Form ಜೊತೆಗೆ ಸೇರಿಸಿ ಮಾಡಿ ಶಾಶ್ವತವಾಗಿ ಸಂರಕ್ಷಿಸಲು ತಿಳಿಸಿದೆ.

(ಸೌಜನ್ಯ ಭಾ.ಆ.ಸೇ)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

24/11 24/11

ರವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಉಪನಿರ್ದೇಶಕರು(ಆಡಳಿತ) ಇವರ ಮುಖಾಂತರ ಸೂಕ್ತ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿಗಳಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಸೂಕ್ತ ಕ್ರಮಕ್ಕಾಗಿ
4. ಕಛೇರಿ ಪ್ರತಿ.